<u>1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>

<u>Civil Misc.485/2022</u>

PW- 01

ಪ್ರ. ಬೋ. ದಿನಾಂಕಃ 11-10-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ವಿರುಪಾಕ್ಷಪ್ಪ |
| ತಂದೆ/ಗಂಡನ ಹೆಸರು | : | ಕಲ್ಲಪ್ಪ |
| ವಯಸ್ಸು | : | 70 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಲಕ್ಕಶೆಟ್ಟಿಹಳ್ಳಿ ಗ್ರಾಮ |

ಈ ದಿನ ನಾನು ಸಲ್ಲಿಸಿರುವ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರ ವಿಷಯಗಳು ಸತ್ಯವಾಗಿರುತ್ತವೆ ಹಾಗೂ ಪ್ರಮಾಣಪತ್ರದಲ್ಲಿರುವ ಸಹಿ ನನ್ನದಾಗಿದೆ.

<u>ಮುಂದುವರೆದ ಮುಖ್ಯ ವಿಚಾಣೆ -</u> ಅರ್ಜಿದಾರರ ಪರ ಶ್ರೀ ಎಸ್.ಆರ್.ಎ.ವಕೀಲರಿಂದ.

ನನ್ನ ಜಮೀನಿನ ಒಂದು ಪಹಣಿ ಪತ್ರಿಕೆ ಹಾಜರುಪಡಿಸಿದ್ದು, ಅದನ್ನು ನಿಪಿ.1 ಎಂದು ಗುರುತಿಸಲಾಯಿತು. ಲಕ್ಕಶೆಟ್ಟಿ ಹಳ್ಳಿ ಗ್ರಾಮದ ಸಬ್ ರಿಜಿಸ್ಟರ್ ಮೌಲ್ಯ ಮಾಪನ ಪಟ್ಟಿ ಹಾಜರುಪಡಿಸಿದ್ದು, ಅದನ್ನು ನಿಪಿ. 2 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ -</u> ಎದುರುದಾರರ ಪರ ಶ್ರೀ ಎನ್ ಕೆ . ವಕೀಲರಿಂದ.

ನನ್ನದು ಖುಶ್ಕಿ ಜಮೀನು ಎನ್ನುವುದು ಸರಿ. 18 ವರ್ಷದ ಹಿಂದೆ ಲೈನು ಹಾಕಿದ್ದಾರೆ ಎನ್ನುವುದು ಸರಿ. ವಿದ್ಯುತ್ ಲೈನ್ ಹಾಕುವಾಗ ನಾವು ಆಕ್ಷೇಪಣೆ ಮಾಡಿಲ್ಲ ಕಾರಣ ಪರಿಹಾರ ಕೊಡುತ್ತೇವೆಂದು ಹೇಳಿದ್ದರು. ನನಗೆ ಇಲ್ಲಿಯವರೆಗೂ ಯಾವುದೇ ಪರಿಹಾರ ಕೊಟ್ಟಿರುವುದಿಲ್ಲ. ಈ ಅರ್ಜಿಯನ್ನು ಕಾಲ ವಿಳಂಬ ಮಾಡಿ ಸಲ್ಲಿಸಲಾಗಿದೆ ಎನ್ನುವುದು ಸರಿಯಲ್ಲ. ಎದುರುದಾರರು ಯಾವುದೇ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎನ್ನುವುದು ಸರಿಯಲ್ಲ. ಪರಿಹಾರ ಬೇಕು ಎಂದು ಎದುರುದಾರರ ಇಲಾಖೆಗೆ ಅರ್ಜಿ ಸಲ್ಲಿಸಿಲ್ಲ. ನನ್ನ ಜಮೀನಿನಲ್ಲಿ ವಿದ್ಯುತ್ ಲೈನ್ ಎಳೆದಿರುವ ಬಗ್ಗೆ ಯಾವುದೇ ಸರ್ವೆ ಮಾಡಿಸಿಲ್ಲ. ಸರ್ವೆ ಮಾಡಿಸಿದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎನ್ನುವುದು ಸರಿ. ಜಮೀನಿನಲ್ಲಿ ಬೋರ್ ವೆಲ್ ಇದ್ದು, ವಿದ್ಯತ್ ಲೈನ್ ನಿಂದ 50 ಅಡಿ ದೂರದಲ್ಲಿದೆ. ಆ ಬಗ್ಗೆ ದಾಖಲು

ಹಾಜರುಪಡಿಸಿಲ್ಲ. 2 ಲಕ್ಷ ಬೆಳೆ ನಷ್ಟವಾಗಿದೆ ಎನ್ನುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಭೂಮಿಯ ಮೌಲ್ಯ 10 ಲಕ್ಷ ಕಡಿಮೆಯಾಗಿದೆ ಎನ್ನುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನನ್ನ ಜಮೀನಿನ ಮೌಲ್ಯ ಎಕರೆಗೆ 30 ಲಕ್ಷ ಬೆಲೆಬಾಳುತ್ತಿತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. 35 ಲಕ್ಷ ನಷ್ಟವಾಗಿದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಆ ರೀತಿ ನಷ್ಟವಾಗಿಲ್ಲ ಎನ್ನುವುದು ಸರಿಯಲ್ಲ. ಲೈನ್ ಕೆಳಗಡೆ ಮೆಕ್ಕೆ ಜೋಳ ಬೆಳೆಯಲು ತೊಂದರೆ ಇಲ್ಲ ಎನ್ನುವುದು ಸರಿಯಲ್ಲ. ಲೈನ್ ಕೆಳಗೆ ಭತ್ತ ಬೆಳೆದಾಗ ಸುಟ್ಟಿರುತ್ತದೆ. ಆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಎಷ್ಟು ವಿಸ್ತೀರ್ಣದಲ್ಲಿ ವಿದ್ಯುತ್ ತಂತಿ ಹಾಕಲಾಗಿದೆ ಎನ್ನುವ ಬಗ್ಗೆ ಸಂಬಂಧಪಟ್ಟ ಇಲಾಖೆಯಿಂದ ಯಾವುದೇ ದಾಖಲೆ ಪಡೆದಿಲ್ಲ. ಆ ರೀತಿ ದಾಖಲೆ ಹಾಜರುಪಡಿಸಿಲ್ಲ. ವಿದ್ಯುತ್ ಲೈನ್ ಹಾಕಿರುವುದರಿಂದ ನನಗೆ ಅನುಕೂಲವಾಗಿದೆ ಎನ್ನುವುದು ಸರಿಯಲ್ಲ. ಸಬ್ ರಜಿಸ್ಟರ್ ಕಛೇರಿಯಿಂದ ಭೂಮಿ ಮೌಲ್ಯದ ನಷ್ಟದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ಪರಿಹಾರ ಪಡೆಯುವ ದುರುದ್ದೇಶದಿಂದ ಸುಳ್ಳುಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆಃ</u>- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ

ನ್ಯಾಯಾಧೀಶರು, ದಾವಣಗೆರೆ.